ಕಡೂರು ಡಿಸ್ಟ್ರಿಕ್ಟು.

ತಾರೀಖು 22ನೇ ಡಿಸಂಬರ್ 1886.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನ್ನು ಕ್ರಮವಾದ ವಾರಸ್ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ಒಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷ್ಯನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸುತ್ತೆ.

ಜುಜಿ ನಂ.	ಯೂನಿಯನ್ ಬುಕ್ಕು ನಂ.	ದಸ್ತಾವೇಜು ನಂಬರ್.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿದ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	I	54 1884—85	22—5—84		22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ವಕ್ಕಲಿಗರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಸೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.
2	ಡಿಟೋ	58 1884—85	26—5—84		26—5—84	ತಿರಿಗೂರಲ್ಲಿರುವ ತೆವಾಲಾರದ ಜಾತಿ ಹುಲಿಗೌಡನ ಮಗ ನಂಜೇಗೌಡ	ತಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಲಚ್ಚಯ್ಯಸೇರ್ವಗಾರ	ತಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟೋ	134 1884—85	22—7—84		23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ವಕ್ಕಲ ಮಕ್ಕಳ ಜಾತಿ ತಿಮ್ಮೇಗೌಡ	ಹವಳ್ಳಿಯಲ್ಲಿರುವ ಹಳೆಮನೆ ಸಂಣ ನಿರುವಾಣಿಗೌಡರ ಸಬ್ಬೇಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ಪೈಕೀ ಕಾಫಿ ಹಿತ್ತು 50 ರೂಪಾಯಿಯನ್ನ ತೀರಿಸಿಕೊಳ್ಳುವ ಬಗ್ಗೆ 10 ವರುಷದ ವರಿಗೆ ಅಳಿಭೋಗ್ಯದಿ ಮಾಡಿರುವಂತೆ.

ಟಿ. ವ್ಯಾಂಡರ್‌ಲೋರ್,
ಫಾರ್ ರಿಜಿಸ್ಟ್ರಾರ್.

ನೋಟೀಸ್.

ಕೊಡಗು ಫಾರೆಸ್ಟ್ಸ್ ಡಿಪ್ಯೂಟಿ ಕನ್‌ಸರ್‌ವೇಟರ್ ಆಫೀಸಿನಿಂದ.

ತಾರೀಖು 23ನೇ ಮಾಹೆ ಡಿಸಂಬರ್ 1886.

ಇದರ ಕೆಳಗೆ ನಮೂದಿಸುವ ನಾಟಗಳನ್ನು ಮೈಸೂರು ಡಿಸ್ಟ್ರಿಕ್ಟು ಹುಣಸೂರಲ್ಲಿ ಇರುವ ಕೊಡಗು ಡಿಪೋದಲ್ಲಿ ಬರುವ ಸ॥ 1887ನೇ ಇಸವಿ ಫಿಬ್ರವರೀ ತಾರೀಖು 3ರಲ್ಲು ಬಹಿರಂಗವಾದ ಹರಾಜು ಮೂಡೋಣಾಗುತ್ತದೆ.

ಸಾಗುವಾನಿ ನಾಟಗಳು 600. ಇತರ ನಾಟಗಳು 500.

ಷರತ್ತು—ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರು ಸ॥ 1885ನೇ ಇಸವಿ ಮೇ ತಾರೀಖು 16ನೇ ನಂಬರ್ 9ರ ಇಸ್ತಿಹಾರ್ ನಾಮೆಯಲ್ಲಿ ನಮೂದಿರುವ ಮೇರೆ.

ಯಫ್. ಬಿ. ಡಿಕ್ಕ್ರ್ಸ್,
ಕೊಡಗು ಫಾರೆಸ್ಟ್ಸ್ ಡಿಪ್ಟಿ ಕನ್‌ಸರ್‌ವೇಟರ್.